# ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ (ನಿ)
## ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು.

ದಿನಾಂಕ: **29–10–2020** ರಂದು ಅಪರಾಹ್ನ **05–00** ಗಂಟೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಸಭಾ ನಡವಳಿಗಳು.

| ಕ್ರ.ಸಂ | ಅಧಿಕಾರಿಗಳು | ಪದನಾಮ |
|---|---|---|
| | **ಹಾಜರಿದ್ದವರು** | |
| 1 | ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಅಧ್ಯಕ್ಷರು |
| 2 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |
| 3 | ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |
| 5 | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |
| 6 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ) ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |
| | **ಗೈರುಹಾಜರಾಗಿದ್ದವರು** | |
| 7 | ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಅಧಿಕಾರಿಗಳು ಕೆನರಾ ಬ್ಯಾಂಕ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |
| 8 | ಜನರಲ್ ಮ್ಯಾನೇಜರ್(ಸೂಪರಿನ್‌ಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಸದಸ್ಯರು |

ಪ್ರಸಕ್ತ ಸಾಲಿನ ಆರ್ಥಿಕ ವರ್ಷ 2020–21ರಲ್ಲಿ ಕರೆಯಲಾದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಗೆ ಹಾಜರಾದ ಜಿಲ್ಲಾ ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಸಮಿತಿಯ ಎಲ್ಲಾ ಸದಸ್ಯರುಗಳನ್ನು ಸದಸ್ಯ ಕಾರ್ಯದರ್ಶಿಗಳು ಸಭೆಗೆ ಸ್ವಾಗತಿಸಿದರು.

**2020–21**ರ ಕ್ರಿಯಾ ಯೋಜನೆಯಲ್ಲಿ ತಿಳಿಸಿರುವಂತೆ ಪತ್ರಿಕಾ ಪ್ರಕಟಣೆ ಹೊರಡಿಸಿ ಅರ್ಹ ಉಪ್ಪಾರ ಸಮಾಜದವರು ಮತ್ತು ಇದರ ಉಪಜಾತಿಗಳ ಜನರಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ:**05–09–2020** ರಂದು ಕೊನೆಯ ದಿನಾಂಕವಾಗಿದ್ದು, ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಯೋಜನಾವಾರು ಪಟ್ಟಿ ಮಾಡಿ ಆಯ್ಕೆ ಸಮಿತಿ ಮುಂದೆ ಮಂಡಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಬೇಕೆಂದು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

2020–21ನೇ ಸಾಲಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ನಿಗದಿಪಡಿಸಿರುವ ಆರ್ಥಿಕ ಮತ್ತು ಭೌತಿಕ ಗುರಿಯ ವಿವರವನ್ನು ಆಯ್ಕೆ ಸಮಿತಿ ಸಭೆಯ ಗಮನಕ್ಕೆ ತಂದರು.



ಸದಸ್ಯ ಕಾರ್ಯದರ್ಶಿ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-560 032

ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

Scanned with CamScanner

| ಕ್ರ. ಸಂ | ಯೋಜನೆಗಳ ಹೆಸರು | ನಿಗದಿಪಡಿಸಿದ ಗುರಿ (ಲಕ್ಷ ರೂ.ಗಳಲ್ಲಿ) | |
|---|---|---|---|
| | | ಭೌತಿಕ | ಆರ್ಥಿಕ |
| (ಅ) | (ಆ) | (ಇ) | (ಈ) |
| 1 | ಸ್ವಯಂ ಉದ್ಯೋಗ ನೇರಸಾಲ ಯೋಜನೆ | 3 | 1.50 |
| 2 | ಅರಿವು ಶೈಕ್ಷಣಿಕ ಸಾಲ ಯೋಜನೆ | 1 | 0.58 |
| ಒಟ್ಟು | | 4 | 2.08 |

ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ವಿವಿಧ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ ಸರ್ಕಾರದಿಂದ ನಿಗದಿಪಡಿಸಿರುವ ಮಾರ್ಗಸೂಚಿ, ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ನಿಗಮದ **ಬೆಂಗಳೂರು ಉತ್ತರ** ಜಿಲ್ಲೆಗೆ ವಿವಿಧ ಯೋಜನೆಗಳಡಿ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಸ್ವೀಕೃತವಾದ ಅರ್ಜಿಗಳನ್ನು ಸಮಿತಿಯು ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆ/ಉದ್ಯಮ ಸ್ಥಾಪಿಸಲು ಹೊಂದಿರುವ ಅನುಭವ/ಆಸಕ್ತಿ/ಸಾಮರ್ಥ್ಯ ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಯೋಜನಾವಾರು ಈ ಕೆಳಕಂಡಂತೆ ಆಯ್ಕೆ ಮಾಡಿತು.

**1) ಸ್ವಯಂ ಉದ್ಯೋಗ ಸಾಲ ಯೋಜನೆ:-**

ಅರ್ಜಿದಾರರು ಸ್ವಯಂ ಉದ್ಯೋಗಕ್ಕೆ ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆ ಮತ್ತು ಸಾಮರ್ಥ್ಯಕ್ಕನುಗುಣವಾಗಿ ಗರಿಷ್ಠ ರೂ.2.00 ಲಕ್ಷಗಳವರೆಗೆ ಆರ್ಥಿಕ ನೆರವನ್ನು ಈ ಕೆಳಕಂಡಂತೆ ಒದಗಿಸಲಾಗುವುದು.

- ರೂ.50,000/-ಗಳವರೆಗಿನ ಘಟಕ ವೆಚ್ಚದ ಆರ್ಥಿಕ ಚಟುವಟಿಕೆಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನವನ್ನು ಹಾಗೂ ಉಳಿಕೆ ಶೇ.70ರಷ್ಟು ಗರಿಷ್ಠ ರೂ.40,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡುವುದು.
- ರೂ.50,001/-ರಿಂದ ರೂ.1,00,000/-ಗಳವರೆಗಿನ ಘಟಕ ವೆಚ್ಚದ ಆರ್ಥಿಕ ಚಟುವಟಿಕೆಗಳಿಗೆ ಶೇ.20ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ ಉಳಿಕೆ ಶೇ.80ರಷ್ಟು ಗರಿಷ್ಠ ರೂ.80,000/-ಗಳು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡುವುದು.
- ರೂ.1,00,001/-ರಿಂದ ಗರಿಷ್ಠ ರೂ.2,00,000/-ಗಳ ವರೆಗಿನ ಘಟಕ ವೆಚ್ಚಗಳ ಆರ್ಥಿಕ ಚಟುವಟಿಕೆಗಳಿಗೆ ಕನಿಷ್ಠ ರೂ.20,000/-ಗಳಿಂದ ಗರಿಷ್ಠ ರೂ.30,000/-ಗಳ ಸಹಾಯಧನ, ಉಳಿಕೆ ಮೊತ್ತ ಶೇ.85ರಷ್ಟು ಗರಿಷ್ಟ ರೂ.1,70,000/-ಗಳು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಲಾಗುವುದೆಂದು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಆಯ್ಕೆ ಸಮಿತಿಯು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಸ್ವೀಕೃತಗೊಂಡ ಸ್ವಯಂ ಉದ್ಯೋಗ ಸಾಲ ಯೋಜನೆಯ ಎಲ್ಲಾ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರ್ಜಿದಾರರು ಕೈಗೊಳ್ಳುವ ಉದ್ದೇಶದ ಲಾಭದಾಯಕತೆ ಮತ್ತು ಸಮಂಜಸತೆಯನ್ನು ಆಧರಿಸಿ ಉದ್ದೇಶ ಹಾಗೂ ಫಲಾನುಭವಿಗಳ ಆದಾಯದ ಮಿತಿವಾರು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಸೂಕ್ತವೆಂದು ಆಯ್ಕೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿ, ಜಿಲ್ಲೆಗೆ ನಿಗದಿಪಡಿಸಿರುವ ಭೌತಿಕ ಗುರಿ ಅತಿ ಕಡಿಮೆ ಇದ್ದು, ಸೌಲಭ್ಯ ಕೋರಿ ಸ್ವೀಕೃತಗೊಂಡ ಅರ್ಜಿಗಳು ಹೆಚ್ಚಾಗಿರುವ ಬಗ್ಗೆ ಪರಿಶೀಲಿಸಿ, ಹೆಚ್ಚಿನ ಜನರಿಗೆ ಸೌಲಭ್ಯ ಒದಗಿಸುವ ಉದ್ದೇಶದಿಂದ ಹಾಗೂ ವಿಕಲಚೇತನರಿಗೆ ಮತ್ತು



ಸದಸ್ಯ ಕಾರ್ಯದರ್ಶಿ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-560 032

ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

Scanned with CamScanner

ವಿಧವೆಯರಿಗೆ ಮೊದಲ ಆದ್ಯತೆ ನೀಡುವುದು ಸೂಕ್ತವೆಂದು ಪರಿಗಣಿಸಿ ಉಪ್ಪಾರ ಸಮಾಜದವರು ಮತ್ತು ಇದರ ಉಪಜಾತಿಗಳಿಗೆ ಸೇರಿದವರು ಸ್ವಯಂ ಉದ್ಯೋಗಳನ್ನು ಕೈಗೊಳ್ಳಲು ಪ್ರತಿ ಫಲಾನುಭವಿಗಳಿಗೆ ತಲಾ ರೂ.10,000/-ಗಳ ಸಹಾಯಧನ ಹಾಗೂ ರೂ.40,000/-ಗಳ ಸಾಲ ಹೀಗೆ ಒಟ್ಟು ರೂ.50,000/-ಗಳಂತೆ 03 ಮಂದಿ ಫಲಾನುಭವಿಗಳಿಗೆ ಸಾಲ ರೂ.1,20,000/-ಗಳು ಹಾಗೂ ಸಹಾಯಧನ ರೂ.30,000/-ಗಳು ಹೀಗೆ ಒಟ್ಟು ರೂ.1,50,000/-ಗಳು ಹಾಗೂ ಹೆಚ್ಚುವರಿಯಾಗಿ 02 ಮಂದಿ ಫಲಾನುಭವಿಗಳಿಗೆ ಸಾಲ ರೂ.80,000/-ಗಳು ಹಾಗೂ ಸಹಾಯಧನ ರೂ.20,000/-ಗಳು ಹೀಗೆ ಒಟ್ಟು ರೂ.1,00,000/-ಗಳು ಒಟ್ಟು 05 ಮಂದಿ ಫಲಾನುಭವಿಗಳಿಗೆ ಒಟ್ಟು ಸಾಲ ರೂ.2,00,000/-ಗಳು ಹಾಗೂ ಸಹಾಯಧನ ರೂ.50,000/- ಹೀಗೆ ಒಟ್ಟು **ರೂ.2,50,000/-ಗಳನ್ನು** ಈ ಕೆಳಕಂಡಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿ ಮಂಜೂರು ಮಾಡಿತು.

**ಅರ್ಹ ಫಲಾನುಭವಿಗಳ ಆಯ್ಕೆ ಪಟ್ಟಿ**

| ಕ್ರ ಸಂ. | ಫಲಾನುಭವಿಗಳ ಹೆಸರು ಮತ್ತು ಪೂರ್ಣ ವಿಳಾಸ | ಜಾತಿ ಮತ್ತು ಆದಾಯ | ವಯಸ್ಸು | ಸಾಲದ ಉದ್ದೇಶ | KYC ದಾಖಲೆ ಸಂಖ್ಯೆ | ಸಹಾಯ ಧನ ರೂ. | ಸಾಲ ರೂ. | ಒಟ್ಟು ರೂ. |
|---|---|---|---|---|---|---|---|---|
| | **ಯಲಹಂಕ** | | | | | | | |
| 1 | ಪದ್ಮಾವತಿ ಜಿ ಎನ್ ಕೋಂ ಚೌಡಪ್ಪ #499, ಮಹೇಶ್ವರಮ್ಮ ಟೆಂಪಲ್ ಸ್ಟ್ರೀಟ್, ಯಲಹಂಕ ಬೆಂಗಳೂರು ಉತ್ತರ, 560064. **ಆಂಧ್ರ ಬ್ಯಾಂಕ್ ವಿದ್ಯಾನಗರ, 17031010024918.** | ಉಪ್ಪಾರ ಪ್ರ-1 45000 | 29 | ಸೀರೆ ವ್ಯಾಪಾರ | 9253 1793 3251 | 10,000 | 40,000 | 50,000 |
| | **ಮಹಾಲಕ್ಷ್ಮೀ ಲೇಔಟ್** | | | | | | | |
| 2 | ಮಂಜುನಾಥ್ ಬಿನ್ ಪುಟ್ಟೇಶಪ್ಪ #112/19, 1ನೇ ಮಹಡಿ, 3ನೇ ಕ್ರಾಸ್, 1ನೇ ಮೇನ್, ಭೋವಿಪಾಳ್ಯ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-560086. | ಉಪ್ಪಾರ ಪ್ರ-1 11000 | 30 | ಟೈಲರಿಂಗ್ | 6205 8937 7084 | 10,000 | 40,000 | 50,000 |
| | **ಕೆ.ಆರ್.ಪುರಂ** | | | | | | | |
| 3 | ಮಲ್ಲಪ್ಪ ಬಿನ್ ಬಸಪ್ಪ #03, ಬಾಲಾಜಿ ಲೇಔಟ್, ನಾಗರೇಶ್ವರ ನಾಗೇನಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು-77. **(ವಿಕಲಚೇತನರು)** | ಉಪ್ಪಾರ ಪ್ರ-1 11000 | 33 | ಬಟ್ಟೆ ವ್ಯಾಪಾರ | 7941 8734 3168 | 10,000 | 40,000 | 50,000 |
| | **ಒಟ್ಟು** | | | | | **30,000** | **1,20,000** | **1,50,000** |

**(ಒಟ್ಟು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**

ನಿಗದಿಪಡಿಸಿದ ಗುರಿಯಲ್ಲಿ ಆಯ್ಕೆಯಾದ ಫಲಾನುಭವಿಗಳಲ್ಲಿ ಯಾವುದಾದರೂ ನಿರ್ದಿಷ್ಟ ಕಾರಣಗಳಿಗೆ (ಉದಾಹರಣೆಗೆ:-ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿದವರು ಅಥವಾ ಮೂಲ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಥವಾ ಈಗಾಗಲೇ ನಿಗಮದಿಂದ ಸಾಲ ಸೌಲಭ್ಯ ಪಡೆದಿದ್ದಲ್ಲಿ, ಇತ್ಯಾದಿ.) ರದ್ದಾದ್ದಲ್ಲಿ, ಪರ್ಯಾಯವಾಗಿ ಪರಿಗಣಿಸಲು ತೀರ್ಮಾನಿಸಿ ಹಾಗೂ ಅನುದಾನ ಲಭ್ಯತೆಯಿದ್ದಲ್ಲಿ ಸಾಲ ಹಾಗೂ ಸಹಾಯಧನ ಮಂಜೂರಾತಿಗೆ ಪರಿಗಣಿಸಲು ಈ ಕೆಳಕಂಡಂತೆ ಕಾಯ್ದಿರಿಸಿದ ಅಥವಾ ಹೆಚ್ಚುವರಿ ಪಟ್ಟಿಯಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿ ಆಯ್ಕೆ ಮಾಡಿ ಮಂಜೂರು ಮಾಡಿತು.

ಸದಸ್ಯ ಕಾರ್ಯದರ್ಶಿ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-560 032



ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

Scanned with CamScanner

## ಅರ್ಹ ಫಲಾನುಭವಿಗಳ ಹೆಚ್ಚುವರಿ ಆಯ್ಕೆ ಪಟ್ಟಿ

| ಕ್ರ ಸಂ. | ಫಲಾನುಭವಿಗಳ ಹೆಸರು ಮತ್ತು ಪೂರ್ಣ ವಿಳಾಸ | ಜಾತಿ ಮತ್ತು ಆದಾಯ | ವಯಸ್ಸು | ಸಾಲದ ಉದ್ದೇಶ | KYC ದಾಖಲೆ ಸಂಖ್ಯೆ | ಸಹಾಯ ಧನ ರೂ. | ಸಾಲ ರೂ. | ಒಟ್ಟು ರೂ. |
|---|---|---|---|---|---|---|---|---|
| | | | | ಮಹಾಲಕ್ಷ್ಮೀ ಲೇಔಟ್ | | | | |
| 1 | ಬೇಬಮ್ಮ ಕೋಂ ಶಿವರಾಮಶೆಟ್ಟಿ #91/3, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಬೋವಿಪಾಳ್ಯ, ಬೆಂಗಳೂರು-560086. **ಇಂಡಿಯನ್ ಬ್ಯಾಂಕ್ ರಾಜಾಜಿನಗರ ಶಾಖೆ 622027346.** | ಉಪ್ಪಾರ ಪ್ರ-1 11000 | 33 | ತರಕಾರಿ ವ್ಯಾಪಾರ | 9423 9395 8870 | 10,000 | 40,000 | 50,000 |
| | | | | ಮಲ್ಲೇಶ್ವರಂ | | | | |
| 2 | ಲಕ್ಷ್ಮೀ ಎಂ ಬಿನ್ ಮಹಾದೇವ #3968/4, ಎ ಅಡ್ಡರಸ್ತೆ, ಬಿ ಬ್ಲಾಕ್, 2ನೇ ಹಂತ, ರಾಜಾಜುನಗರ, ಸುಬ್ರಮಣ್ಯನಗರ, ಬೆಂಗಳೂರು-560021. **ಎಸ್.ಬಿ.ಐ ಗಾಯಿತ್ರಿನಗರ ಶಾಖೆ 64154141881.** | ಉಪ್ಪಾರ ಪ್ರ-1 14000 | 39 | ತರಕಾರಿ ವ್ಯಾಪಾರ | 8395 0417 7978 | 10,000 | 40,000 | 50,000 |
| | **ಒಟ್ಟು** | | | | | **20,000** | **80,000** | **1,00,000** |
| 03 | **ಆಯ್ಕೆ ಪಟ್ಟಿ ಒಟ್ಟು** | | | | | **30,000** | **1,20,000** | **1,50,000** |
| 02 | **ಹೆಚ್ಚುವರಿ ಆಯ್ಕೆ ಪಟ್ಟಿ ಒಟ್ಟು** | | | | | **20,000** | **80,000** | **1,00,000** |
| 05 | **GRAND TOTAL** | | | | | **50,000** | **2,00,000** | **2,50,000** |

**(ಒಟ್ಟು ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**

ಮೇಲ್ಕಂಡ ಮುಖ್ಯ ಆಯ್ಕೆ ಪಟ್ಟಿ ಹಾಗೂ ಕಾಯ್ದಿರಿಸಿದ ಅಥವಾ ಹೆಚ್ಚುವರಿ ಪಟ್ಟಿಯಾಗಿ ಆಯ್ಕೆ ಮಾಡಿರುವ ಫಲಾನುಭವಿಗಳ ಪಟ್ಟಿಗಳಿಗೆ ಹಣ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರವರಿಗೆ/ಸಹಾಯಕ ಪ್ರಧಾನ ವ್ಯವಸ್ಥಾಪಕರವರಿಗೆ ಕಳುಹಿಸಲು ಆಯ್ಕೆ ಸಮಿತಿಯು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಿತು.

## 2) ಅರಿವು ಶೈಕ್ಷಣಿಕ ಸಾಲ ಯೋಜನೆ:-

ಹಿಂದುಳಿದ ವರ್ಗಗಳ ಪ್ರವರ್ಗ-2ಎ ರಲ್ಲಿ ಬರುವ ಉಪ್ಪಾರ ಸಮಾಜದವರು ಮತ್ತು ಇದರ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವೃತ್ತಿಪರ, ತಾಂತ್ರಿಕ, ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ.) ಸೀಟು ಪಡೆದು ಕಾಲೇಜಿಗೆ ಸೇರ್ಪಡೆಯಾದವರಿಗೆ ವ್ಯಾಸಂಗ ಮುಂದುವರೆಸಲು ಅವರ ವ್ಯಾಸಂಗಕ್ಕಾಗಿ ಪ್ರತಿ ವರ್ಷ ಪ್ರವೇಶ ಶುಲ್ಕ ಇತ್ಯಾದಿಗಳಿಗೆ ವಾರ್ಷಿಕ ರೂ.1.00 ಲಕ್ಷಗಳಂತೆ ಕೋರ್ಸಿನ ಅವಧಿಗೆ ಗರಿಷ್ಠ ರೂ.4.00 ರಿಂದ 5.00 ಲಕ್ಷಗಳವರೆಗೆ ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ಮಂಜೂರು ಮಾಡಲಾಗುವುದೆಂದು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಸದಸ್ಯ ಕಾರ್ಯದರ್ಶಿ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-560 032



ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

Scanned with CamScanner

ಈ ಯೋಜನೆಯಡಿ ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ವಿದ್ಯಾರ್ಥಿಗಳಿಂದ ಅರ್ಜಿಗಳು ಸ್ವೀಕೃತಗೊಂಡಿರುವುದಿಲ್ಲ ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ನಡೆದಿದ್ದು, ಕೋವಿಡ್-19ರ ಸಾಂಕ್ರಮಿಕ ಖಾಯಿಲೆಯಿಂದ ಜನರು ಅಂತರ ಕಾಯ್ದುಕೊಳ್ಳಲು ಘನ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ವಿದ್ಯಾರ್ಥಿಗಳ ಸಮಾಲೋಚನೆ ಸಭೆ CET Counseling ನಡೆಸಿರುವುದಿಲ್ಲ. ಆದ್ದರಿಂದ ಸದರಿ ಯೋಜನೆಯಡಿ ಕೋರಿ ಯಾವುದೇ ವಿದ್ಯಾರ್ಥಿಗಳಿಂದ ಅರ್ಜಿಗಳು ಸ್ವೀಕೃತಗೊಂಡಿರದ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಅದರಂತೆ, ಅರಿವು ಶೈಕ್ಷಣಿಕ ಸಾಲ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ CET Counseling ಪೂರ್ಣಗೊಂಡ ನಂತರ ಸ್ವೀಕೃತಗೊಳ್ಳುವ ಅರ್ಜಿಗಳನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಹಾಗೂ ಸಕಾಲದಲ್ಲಿ ಸೌಲಭ್ಯ ಒದಗಿಸಲು ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ. ಇವರಿಂದ ಅನುಮೋದನೆ ಪಡೆದು ಸಾಲ ಮಂಜೂರಾತಿಗೆ ಪ್ರಸ್ತಾವನೆ ಕಳುಹಿಸುವುದು ಸೂಕ್ತವೆಂದು ಆಯ್ಕೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.

ಮುಂದುವರೆದು, ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಂದ ಅನುಮೋದನೆ ಪಡೆದು ಪ್ರಸ್ತಾವನೆ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸಮಿತಿಯು ಸರ್ವಾನುಮತದಿಂದ ಅಧಿಕಾರ ನೀಡಿತು.

ನಂತರ ಚರ್ಚಿಸಲು ಹೆಚ್ಚಿನ ವಿಷಯಗಳಿಲ್ಲದ ಪ್ರಯುಕ್ತ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಸದಸ್ಯ ಕಾರ್ಯದರ್ಶಿಗಳು ಹಾಗೂ
ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ)
ಜಿಲ್ಲಾ ವ್ಯವಸ್ಥಾಪಕರು, ಕ.ಉ.ಅನಿ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-560 032
ಬೆಂಗಳೂರು ಉತ್ತರ ಜಿಲ್ಲೆ.

ಆಯ್ಕೆ ಸಮಿತಿ ಅಧ್ಯಕ್ಷರು, ಹಾಗೂ
ಆಯ್ಕೆ ಸಮಿತಿ ಅಧ್ಯಕ್ಷರು ಹಾಗೂ
ಮು.ಕಾ.ನಿ.ಅ.ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ



Scanned with CamScanner